**ಮಾನ್ಯ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ಇವರ ನಿಯಮ 330 ನೇ ರಡಿಯಲ್ಲಿ ಕೋರಿದ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ಪ್ರಶ್ನೆ:**

ಅ) ಕರ್ನಾಟಕ ರಾಜ್ಯ ರಾಜೀವ್ ಗಾಂಧೀ ವಸತಿ ನಿಗಮದ ಅಧೀನದಲ್ಲಿರುವ ಹ್ಯಾಬಿಟೆಟ್ ಕೇಂದ್ರವು ನಿಗಮದ ಕೆಲಸಗಳು ಸೇರಿ ವಿವಿಧ ಇಲಾಖೆಗಳ ಕೋರಿಕೆಯ ಮೇರೆಗೆ ಮನೆ, ಕಟ್ಟಡಗಳು, ರಸ್ತೆ, ಸೇರಿದಂತೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುತ್ತಿದೆ.

ಸದರಿ ಹ್ಯಾಬಿಟೆಟ್ ಕೇಂದ್ರವು ಇನ್ನೊವೇಟಿವ್ ಬಿಲ್ಡಿಂಗ್ ಮಟೆರಿಯಲ್ಸ್ ಹಾಗೂ ಪ್ರೀಕಾಸ್ಟ್ ಟೆಕ್ನಾಲಜಿ ಒಳಗೊಂಡ ಕಾಮಗಾರಿಗಳಿಗೆ ರೂ. 2 ಕೋಟಿ ಗರಿಷ್ಠ ಮೀತಿಯವರೆಗೆ ಕೆಟಿಪಿಪಿ ಕಾಯ್ದೆಯಡಿ 4(G) ವಿನಾಯಿತಿ ಪಡೆದಿರುತ್ತದೆ. ಆದರೆ 2023-24ನೇ ಸಾಲಿನಲ್ಲಿ ಟೆಂಡರ್ ಕರೆಯದೆ ಸುಮಾರು 400 ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸದ್ದು, ಇದರಲ್ಲಿ ಅವ್ಯವಹಾರವಾಗಿದ್ದು, ಕಾಯ್ದೆ ಉಲ್ಲಂಘನೆ ಮಾಡಿದವರ ಮೇಲೆ ಸೂಕ್ತ ಕ್ರಮ ಕೈಗೊಂಡಿರುವ ಬಗ್ಗೆ ಹಾಗೂ ಸಂಪೂರ್ಣ ವಿವರ ನೀಡಬೇಕೆಂದು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರವು ಸಂಘ ಸಂಸ್ಥೆಗಳ ಕಾಯ್ದೆ 1960ರ ಅಡಿಯಲ್ಲಿ ನೊಂದಾಯಿಸಲ್ಪಟ್ಟ ಸ್ವಯಂ ಸಂಸ್ಥೆಯಾಗಿರುತ್ತದೆ. ಆ್ರಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 686 ವೆಚ್ಚ-12/2023, ದಿನಾಂಕ:27.10.2023 ಮತ್ತು ಸಂಖ್ಯೆ: ಆಇ 686 ವೆಚ್ಚ-12/2023, ದಿನಾಂಕ:04.11.2024 ರಡಿಯಲ್ಲಿ 4(G) ವಿನಾಯಿತಿ ಪಡೆಯಲಾಗಿರುತ್ತದೆ(ಅನುಬಂಧದಲ್ಲಿ ಒದಗಿಸಲಾಗಿದೆ). ಈ ಸಂಸ್ಥೆಯು ಸರ್ಕಾರದ ವಿವಿಧ ಇಲಾಖೆಗಳಿಂದ 4(G) ವಿನಾಯಿತಿಯಡಿ ನೇರವಾಗಿ ವಹಿಸಿದ ಕಾಮಗಾರಿಗಳನ್ನು, ಪ್ರಸ್ತುತ ಚಾಲ್ತಿಯಲ್ಲಿರುವ SR ದರದನ್ವಯ ಗುಣಮಟ್ಟದ ಕಾಮಗಾರಿಗಳನ್ನು 2004 ರಿಂದ ನಿರ್ವಹಿಸಿಕೊಂಡು ಬಂದಿರುತ್ತದೆ.

ವಿವಿಧ ಇಲಾಖೆಗಳಿಂದ ಕಾಮಗಾರಿಗಳನ್ನು ಕೇಂದ್ರವು ಸ್ವಯಂ ನಿರ್ವಹಿಸುತ್ತಿದ್ದು, ಅಗತ್ಯವಿರುವ ಕಚ್ಚಾ ಸಾಮಾಗ್ರಿಗಳನ್ನು ವಿವಿಧ ಸರಬರಾಜುದಾರರಿಂದ ಕೋಟೇಷನ್ ಆಧಾರದ ಮೇಲೆ ಅಂತಿಮಗೊಳಿಸಿ ಖರೀದಿಸಲಾಗುವುದು. ಇದರಲ್ಲಿ ಯಾವುದೇ ರೀತಿಯ ಗುತ್ತಿಗೆದಾರರಿಗೆ ವಹಿಸುವ/ ಟೆಂಡರ್ ಕರೆಯುವ ನಡವಳಿ ಇರುವುದಿಲ್ಲ.

ವಿವಿಧ ಇಲಾಖೆಗಳಿಂದ, ಅನೇಕ ಕಾಮಗಾರಿಗಳಿಗೆ ರೂ.2.00 ಕೋಟಿಗಳ ಗರಿಷ್ಠ ಮಿತಿಯಲ್ಲಿ, ನಿಯಮಾನುಸಾರ ಪರಿಶೀಲಸಿ, ನಂತರ ಈ ಸಂಸ್ಥೆಗೆ ನಿರ್ದಿಷ್ಟ ಅನುಮೋದಿತ ದರ (Approved SR ರೀತ್ಯ) ಹಾಗೂ ಷರತ್ತುಗಳೊಂದಿಗೆ ಕಾರ್ಯಾದೇಶ ಹಾಗೂ ಕಾಮಗಾರಿಯ ಕರಾರು ಮುಖಾಂತರ ವಹಿಸಲಾಗುವುದು. ಕಾಮಗಾರಿಗಳನ್ನು ಪೂರ್ಣಗೊಳಿಸಿ, 3ನೇ ವ್ಯಕ್ತಿ ತಪಾಸಣೆ ನಡೆಸಿ, ನಂತರ ಸಂಬಂಧಪಟ್ಟ ಇಲಾಖೆಗಳಿಗೆ ತೃಪ್ತಿಕರವಾದ ನಂತರ ಕಾಮಗಾರಿಗಳನ್ನು ಹಸ್ತಾಂತರಿಸಲಾಗುವುದು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ಸಹ ಕಾಮಗಾರಿ ಅನುಷ್ಠಾನ, ಗುಣಮಟ್ಟ ಮತ್ತು ತೃಪ್ತಿಕರವಾಗಿ ಇರುವ ಬಗ್ಗೆ ದೃಢೀಕರಿಸಿಕೊಳ್ಳುವುದರಿಂದ ಯಾವುದೇ ರೀತಿಯ ಅವ್ಯವಹಾರ ಅಥವಾ ಕಾಯ್ದೆ ಉಲ್ಲಂಘನೆ ಮಾಡದೇ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.

ಸಂ::ವಇ 422 ಹೆಚ್‌ಎಎಂ 2024.

**(ಬಿ.ಝೆಡ್ ಜಮೀರ್ ಅಹಮದ್ ಖಾನ್)**

ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು.